

ಕಲೆ: ಈಶ್ವರ ಬಡಿಗೇರ

ಜಗತ್ತಿನ ಆಹಾರೋತ್ಪಾದನೆಯಲ್ಲಿ ಕಾಲು ಭಾಗವನ್ನು ನುಂಗಿ ನೀರು ಕುಡಿಯುವ ಅಸುರ ಸಂತತಿ ಇದು. ಪಕ್ಕಾ ಆರ್‌ಸಿಸಿ ಮನೆಯಾದ್ರೆ ಅಡ್ಡಿ ಇಲ್ಲ. ಹಳೆ ಮನೆಗಳು, ಹಳ್ಳಿ ಮನೆಗಳಲ್ಲೇ ಉಪದ್ರ ಜಾಸ್ತಿ. ಅವು ತೋಡುವ ದೋರುಗಳಿಗೆ ಬಲಿಯಾಗಿ ಮಳೆಗಾಲದಲ್ಲಿ ಉರುಡಿ ಬಿದ್ದ ಮನೆಗಳು ಅದೆಷ್ಟೋ. ಕರೆಂಟ್ ವೈರನ್ನು ಕಟ್ ಮಾಡಿ ಶಾರ್ಟ್ ಸರ್ಕ್ಯೂಟ್‌ನಿಂದ ಅಪಾಯ ತಂದೊಡ್ಡುವ, ವಾಷಿಂಗ್ ಮೆಷೀನ್, ವಾಹನಗಳ ಎಂಜಿನ್ ಒಳಗೆ ನುಗ್ಗಿ ಸೂಕ್ಷ್ಮ ತಂತಿಗಳನ್ನು ತುಂಡರಿಸಿ ರಿಪೇರಿಗಾಗಿ ಸಾವಿರಾರು ರೂಪಾಯಿ ಬೋಳಿಸುವಂತಹ ದುರ್ಬುದ್ಧಿಗಳನ್ನೆಲ್ಲ ಈ ಮೂಷಿಕಗಳು ಎಲ್ಲಿ ಕಲಿತವೋ! ಇನ್ನು ಹಾಸಿಗೆ, ಬಟ್ಟೆಲಿ ಸೇರಿಕೊಂಡು ಛಿದ್ರ ಛಿದ್ರ ಮಾಡಿ ಹೊಟ್ಟೆಯುರಿಸೋದು ಬೇರೆ.

ಹಂಚಿನ ಮನೆ, ಗುಡಿಸಲುಗಳಲ್ಲಿ ಇವುಗಳನ್ನು ತಿಂದು ತೇಗಲು ಅರಸಿ ಬರುವ ಹಾವುಗಳ ಕಾಟ. ಇದಕ್ಕಿಂತ ಅಪಾಯ ಅಂದ್ರೆ ಮೂತ್ರ–ಹಿಕ್ಕೆಯಿಂದ ತಿನ್ನೋ ಆಹಾರ, ನೀರು ಮಲಿನ ಮಾಡೋದು. ಅವುಗಳ ದೇಹದಲ್ಲಿ ಇಲಿಜ್ವರದ ಬ್ಯಾಕ್ಟೀರಿಯಾ ಇದ್ದರಂತೂ ಗಂಡಾಂತರ. ಅವು ಮುಟ್ಟಿಟ್ಟಿದ್ದನ್ನು ತಿಂದು, ಕುಡ್ದು ಮಾಡ್ದೋರಿಗೆ ಕುತ್ತು! ಇಲಿ ಜ್ವರ ಮನುಷ್ಯಂಗೆ ತಟ್ಟಿ ಸರಿಯಾಗಿ ಪತ್ತೆಯಾಗಿ, ಔಷಧೋಪಚಾರ ಆಗ್ದಿದ್ರೆ ಜೀವಕ್ಕೇ ಕಂಟಕ. ಮಾನವನಿಗೆ ಅಷ್ಟೇ ಅಲ್ಲ, ಮಿಗಗಳಿಗೂ ಈ ಕಾಯಿಲೆಯ ಕಾಟವುಂಟು. ಅಟ್ಟದಲ್ಲಿ ಕೂಡಿಟ್ಟ ಹುಲ್ಲಲ್ಲಿ ಗೂಡು ಕಟ್ಟೋದು, ಅಲ್ಲೇ ಮಕ್ಳು ಮರಿ ಮಾಡಿ ಸಂಸಾರ ಬೆಳೆಸೋದು, ಉಚ್ಚೆ ಹಿಕ್ಕೆ ಅಂತ ಹುಲ್ಲನ್ನೆಲ್ಲಾ ಗಲೀಜು ಮಾಡೋದು. ಪಾಪ! ಈ ಹುಲ್ಲನ್ನು ತಿಂದ ದನಕರುಗಳಿಗಳಲ್ಲೂ ಕಾಯಿಲೆ ಕಾಣಿಸಿಕೊಂಡು ಅದು ಇಂತದ್ದಕ್ಕೇ ಬಂದಿದ್ದೆಂದು ಪತ್ತೆ ಹಚ್ಚಿ ಚಿಕಿತ್ಸೆ ನೀಡೋದು ನಮಗೂ ಮಂಡೆ ಬಿಸಿ ಕೆಲ್ಸ! ಒಂದಾನೊಂದು ಕಾಲದಲ್ಲಿ ಇಲಿಗಳು ಸತ್ತು ಬಿದ್ರೆ ಜನರಲ್ಲಿ ಪ್ಲೇಗಮ್ಮನ ಭೀತಿ ಕಾಡದು. ಪುಣ್ಯಕ್ಕೆ ಈಗ ಆ ದೊಡ್ರೋಗ ಇಲ್ಲ.

ಪಶು ವೈದ್ಯಕೀಯ ವೃತ್ತಿ ನಿರತರಿಗೆ ಈ ಇಲಿ ಹೆಗ್ಗಣಗಳೆಂದರೆ ವಿಪರೀತ ತಲೆ ನೋವು. ಅವು ಕೊಡೋ ಉಪಟಳ ಒಂದೆರಡಲ್ಲ. ಅದ್ಯಾಕೋ ದನ–ಎಮ್ಮೆಗಳ ಎಳೆಗರುಗಳೆಂದರೆ ಈ ದಂಶಕಗಳಿಗೆ ಬಹಳ ವ್ಯಾಮೋಹ. ರಾತ್ರಿ ಅವು ಮಲಗಿದಾಗ ಕೂದ್ಲು ಹೆರೆಯೋದು, ಮೈ ಕಚ್ಚೋದು ಮಾಡ್ತಾ ಆಟ ಆಡ್ತವೆ. ಪಾಪ, ಈ ಹಸುಗಂದಗಳಿಗೆ ಅವುಗಳಿಂದ ತಪ್ಪಿಸಿಕೊಳ್ಳಲು ಬರದೆ ಮೈತುಂಬಾ ಗಾಯ. ಮೊದ್ಲೇ ಇಲಿಗಳ ಹಲ್ಲು, ಜೊಲ್ಲಲ್ಲಿ ನಂಜು ಜಾಸ್ತಿ. ಆಮೇಲೆ ಈ ಗಾಯಗಳೇ ವ್ರಣಗಳಾಗಿ ಕರುಗಳು ಸೋತು ಕಡ್ಡಿಯಾಗ್ತವೆ. ಈ ನಂಜು ತೆಗ್ಯೋದು, ಗಾಯ ವಾಸಿ ಮಾಡದು ಭಾರೀ ಕಿರಿ ಕಿರಿ ಕೆಲ್ಸ. ಇದು ಬಾಲಪೀಡೆಯಾದರೆ ದೊಡ್ಡ ಜಾನುವಾರುಗಳನ್ನು ಇನ್ನೊಂದು ತರ ಕಾಡ್ತವೆ. ಎಮ್ಮೆ ದನಗಳಲ್ಲಿ ಕೆಚ್ಚಲು ಬಾವು ಸಾಮಾನ್ಯ ಸಮಸ್ಯೆ. ಈ ಕಾಯಿಲೆ ಬಂದಾಗ ಮೊಲೆ ತೊಟ್ಟುಗಳು ಕೆಂಪಗೆ, ದಪ್ಪಕ್ಕೆ ಊದ್ಕಂಡು ಬಿಡ್ತವೆ. ಆಗ ಹೆಗ್ಗಣಗಳಿಗೆ ಒಂತರಾ ಹಬ್ಬ. ಅಲ್ಲಲ್ಲಿ ಗಾಯ ಮಾಡಿ ರಕ್ತ ಹೀರಿ, ಮಾಂಸದ ತುಣುಕು ತಿಂದು ಚಿಂದಿ ಮಾಡ್ತವೆ. ಕೆಚ್ಚಲು ಬಾವು ವಾಸಿಯಾದ್ರೂ ಹರಿದ ಮೊಲೆತೊಟ್ಟುಗಳನ್ನು ಸರಿ ಮಾಡಕ್ಕೆ ಆಗ್ದೆ ಅಸಹಾಯಕತೆಯಿಂದ ಕೈಚೆಲ್ಲಿದ ಪ್ರಸಂಗಗಳು ಸಾಕಷ್ಟಿವೆ.

ಇಲಿಮರಿ ಪಾಲನೆ ಬಗ್ಗೆ ಆ ಮಹಿಳೆಗೆ ಉಪದೇಶ ಮಾಡುವಾಗ ಅವುಗಳು ಕೊಡೋ ಉಪದ್ರಗಳೆಲ್ಲ ಮೆಗಾ ಧಾರಾವಾಹಿ ತರ ಕಣ್ಮುಂದೆ ಬಂತು ಅಷ್ಟೆ. ಹೌದು, ನಮ್ಮದು ಚಿತ್ರ ವಿಚಿತ್ರ ಸಂಪ್ರದಾಯಗಳ ತವರು. ಮೊದಲೇ ಗಣೇಶನದ್ದು ಮೂಷಿಕ ವಾಹನ. ಹಾಗಾಗಿ ಇಲಿಗಳಿಗೂ ಪೂಜೆಯುಂಟು. ರಾಜಸ್ಥಾನದ ಕರಣಿಮಾತಾ ಮಂದಿರದಲ್ಲಿ ಜೀವಂತ ಇಲಿಗಳನ್ನು ದೇವರೆಂದು ಪೂಜಿಸುತ್ತಾರೆ. ಇಪ್ಪತ್ತು ಸಾವಿರಕ್ಕೂ ಹೆಚ್ಚು ಇಲಿಗಳು ಅಲ್ಲಿ ಹುಲಿಗಳಂತೆ ಓಡಾಡಿಕೊಂಡಿವೆಯಂತೆ. ಕೇಳಿದರೆ ಮೈ ಜುಮ್ ಎನ್ನುತ್ತದೆ! ಅಕಸ್ಮಾತ್ ಭಕ್ತರ ಕಾಲಡಿಯಲ್ಲಿ ಸಿಕ್ಕಿ ಸತ್ತರೆ? ಪ್ರಾಯಶ್ಚಿತ, ತುಂಬಾ ದುಬಾರಿ. ಚಿನ್ನದ ಮೂಷಿಕ ಮಾಡಿಸಿ ದೇವಸ್ಥಾನಕ್ಕೆ ಒಪ್ಪಿಸಬೇಕು! ಇಲ್ಲಿ ಹಿಂಗಾದ್ರೆ ವಿಯಟ್ನಾಮ್‌ನಲ್ಲಿ ಕೋಳಿ ಫಾರಂಗಳಂತೆ ಇಲಿ ಫಾರಂಗಳೂ ಇವೆ. ಇಲಿ ಮಾಂಸಕ್ಕೆ ಭಯಂಕರ ಬೇಡಿಕೆ ಅಲ್ಲಿ. ಮಾನವ ಸಂಸ್ಕೃತಿಯೇ ಹೀಗಲ್ಲವೇ? ಒಂದೆಡೆ ಕಾಯೋದು, ಮತ್ತೊಂದೆಡೆ ಕೊಲ್ಲೋದು!